# ಆಹಾ ಸುದ್ದಿ!

★ ಸಸಿತೋಟ



ಈತ ಚೀನಾದ ಕುಂಗ್ ಫು ಪ್ರವೀಣ ಶೋಂಗ್ಯಾಂಗ್. ಮೊಟ್ಟೆಗಳ ಮೇಲೆ ನಿಂತು ಸಮತೋಲನ ಸಾಧಿಸುವ ಕಲೆ ಈತನಿಗೆ ಸಿದ್ಧಿಸಿದೆ. ಅದೂ ನೀರು ತುಂಬಿದ ಮೂರು ಬಕೆಟ್‌ಗಳನ್ನು ಹಿಡಿದುಕೊಂಡು. 'ಎಕ್‌ಸ್ಟ್ರೀಮ್' ಕ್ರೀಡೆಯ ಬದಲು 'ಎಗ್‌ಸ್ಟ್ರೀಮ್' ಕ್ರೀಡೆ ಎನ್ನಬಹುದು.




ಈ ಕಲಾಕೃತಿ ಯಾವುದರ ಮೇಲೆ ಕೂತಿದೆ ಗೊತ್ತೇ! ಕೂದಲಿನ ಮೇಲೆ. ಜಾಂಟಿ ಹರ್‌ವಿಟ್ ಎಂಬಾತ ನ್ಯಾನೊ ಪ್ರಿಂಟಿಂಗ್ ತಂತ್ರಜ್ಞಾನ ಬಳಸಿ ಮಿ.ಮೀ.ನ 10ನೇ ಭಾಗಕ್ಕಿಂತಲೂ ಚಿಕ್ಕದಾದ ಕಲಾಕೃತಿ ಸೃಷ್ಟಿಸುವಲ್ಲಿ ನಿಪುಣನಂತೆ. ಫೋಟೊ ತೆಗೆಯುವ ಸಂದರ್ಭದಲ್ಲಿ ಎಷ್ಟೋ ಕಲಾಕೃತಿಗಳು ಕೆಳಗೆ ಉರುಳಿ ಪುಡಿಪುಡಿಯಾದವಂತೆ. ಕಲಾಕೃತಿಗಳು ಬಿದ್ದರೂ ಅವಶೇಷಗಳು ಉಳಿಯುವುದಿಲ್ಲವಲ್ಲ.

ಜರ್ಮನಿಯ ಹ್ಯಾಂಬರ್ಗ್‌ನಲ್ಲೂ ರಸ್ತೆ ಬದಿಯ ಕಾಂಪೌಂಡ್ ಗೋಡೆಗೆ ಮೂತ್ರ ಹೊಯ್ಯುವ ಸಮಸ್ಯೆ ಇದೆಯಂತೆ. ಅದಕ್ಕೇ ಅಲ್ಲಿಯ ಸಂಘವೊಂದು 'ವಾಪಸ್ಸು ಮೂತ್ರ ಹಾರಿಸುವ' ತಂತ್ರ ರೂಪಿಸಿದೆಯಂತೆ. ಎಲ್ಲೆಲ್ಲಿ ಮೂತ್ರ ಮಾಡುತ್ತಾರೆ ಎಂಬುದನ್ನು ಗುರುತಿಸಿ ಆ ಗೋಡೆಗಳಿಗೆ ಹೈಡ್ರೊಫೋಬಿಕ್ ಬಣ್ಣ ಬಳಿದಿದ್ದಾರಂತೆ. ಈ ಬಣ್ಣ ಏನೇ ದ್ರವ ಪದಾರ್ಥ ಬಿದ್ದರೂ ವಾಪಸ್ಸು ಪಿಚಕಾರಿಯಂತೆ ಹಾರಿಸುತ್ತದಂತೆ. ಪ್ಯಾಂಟು, ಶೂಗಳನ್ನು ಮೂತ್ರದಲ್ಲಿ ಒದ್ದೆ ಮಾಡಿಕೊಂಡಾಗ ಮೂತ್ರ ಮಾಡಿದವನು ಯಾರು ಎಂಬುದನ್ನು ಪ್ರಚಾರ ಮಾಡುವ ಪ್ರಮೇಯವೇ ಇಲ್ಲ.

ಮಾಸ್ಕೋದಲ್ಲಿ 'ಒಂದು ಗಂಟೆಗಾಗಿ ಬಾಡಿಗೆ ಪತಿ' ಎಂಬ ಸೇವೆ ಜನಪ್ರಿಯವಾಗುತ್ತಿದೆಯಂತೆ. ಸದೃಢ ಯುವಕರು ಒಂದು ಗಂಟೆ ಕಾಲ ಮನೆಗೆ ಬರುತ್ತಾರಂತೆ. ಬಂದ ಮೇಲೆ ಏನೇನು ಮಾಡಬಹುದು ಎಂದು ಕಲ್ಪಿಸಿಕೊಂಡು ರೋಮಾಂಚಿತರಾಗಬೇಡಿ. ಮನೆಯಲ್ಲಿ ಸಣ್ಣಪುಟ್ಟ ರಿಪೇರಿ ಕೆಲಸವಿದ್ದರೆ ಮಾಡುಕೊಟ್ಟು ಹಣ ಪಡೆದು ತೆರಳುತ್ತಾರಂತೆ. ಒಂಟಿ ಮಹಿಳೆಯರಿದ್ದ ಮನೆಗೆ ಹಾಗೂ ವೃದ್ಧ ದಂಪತಿ ಮನೆಗೆ ಮಾತ್ರ ಈ ಸೇವೆಯಂತೆ.




ಲಾಸ್ ಏಂಜಲೀಸ್‌ನಲ್ಲಿ ಒಳ ಉಡುಪಿನಲ್ಲಿ ಹಾಡುವ ಸ್ಪರ್ಧೆ ನಡೆಯಿತು. ಭಾಗವಹಿಸಿದವರಿಗೆ ಎರಡು ರೀತಿಯ ಭಯ. ಒಂದು ಒಳ ಉಡುಪಿನಲ್ಲಿ ಕಾಣಿಸಿಕೊಳ್ಳುವ ಮುಜುಗರ, ಎರಡು ಸಾರ್ವಜನಿಕವಾಗಿ ಹಾಡುವಾಗಿನ ನಡುಕ. ಒಳ್ಳೆಯ ಶಾರೀರವುಳ್ಳವರು, ಸುಂದರವಾದ ಶರೀರ ಹೊಂದಿರುವವರು ಅಪರೂಪ.



ವಿಸ್ಕಿನ್ಸನ್‌ನಲ್ಲಿ ಮಿಶಿಗನ್ ಸರೋವರದ ದಂಡೆಯ ಮೇಲೆ ಇಬ್ಬರು ಯುವಕರು ನಿಂತಿದ್ದರು. ಕ್ಷಣಾರ್ಧದಲ್ಲೇ 200 ಅಡಿ ದೂರಕ್ಕೆ ತೇಲಿಕೊಂಡು ಹೋಗಿದ್ದರು. ಅವರು ನಿಂತಿದ್ದು ಹಿಮಗಡ್ಡೆಯ ಮೇಲಾಗಿತ್ತು. ಜಾಗತಿಕ ಉಷ್ಣಾಂಶ ಹೇಗೆ ಏರುತ್ತಿದೆ ಎಂಬುದಕ್ಕೆ ಒಳ್ಳೆಯ ಜಾಹೀರಾತಾಗಿ ಬಳಸಿಕೊಳ್ಳಬಹುದು.